

**13** ಅವಳು ಕ್ಷಮೆಯನ್ನು ಕೇಳಲು ಭಗವಾನ್ ಶಿವನ ಬಳಿ ಓಡಿಹೋದಳು.





**14** ವಿದ್ಯಾಪತಿಯು ದೇವಸ್ಥಾನಕ್ಕೆ ಹೋಗಿ ದೇವರೆದುರಿಗೆ ಕುಳಿತುಕೊಂಡನು. ದುರ್ಗೆಯೂ ಅವನ ಜೊತೆಯಲ್ಲಿಯೇ ಕುಳಿತಳು. ಇಬ್ಬರೂ ಉಪವಾಸವ್ರತ ಮಾಡಿದರು.




**15** ಈ ವಿಷಯ ತಿಳಿದು ಜನ ದೇವಸ್ಥಾನದಲ್ಲಿ ಸೇರಿದರು. ರಾಜನೂ ಬಂದನು. ವಿದ್ಯಾಪತಿಯನ್ನು ಬಹಳವಾಗಿ ಕೇಳಿಕೊಂಡನು. ಆದರೆ ವಿದ್ಯಾಪತಿ ತನ್ನ ನಿರ್ಧಾರದಿಂದ ಸ್ವಲ್ಪವೂ ವಿಚಲಿತನಾಗಲಿಲ್ಲ. ಉಪವಾಸದಿಂದ ಅವನು ದಿನೇ ದಿನೇ ಕೃಶನಾದನು. ಅಂದು ಮಧ್ಯರಾತ್ರಿ...




**16** ಮರುದಿನ ಬೆಳಗ್ಗೆ ಬೆಳಗುತ್ತಿರುವ ಮುಖದಿಂದ ವಿದ್ಯಾಪತಿ ಯಾತ್ರೆಗೆ ಹೊರಟನು.




**ಶಿವಭಕ್ತನಾದ ವಿದ್ಯಾಪತಿಯು ಹಾಡಿದ ರಾಧಾಕೃಷ್ಣರ ದಿವ್ಯಪ್ರೇಮದ ಭಕ್ತಿಗಾನದಿಂದ ಇಡೀ ದೇಶವು ಅನುರಣಿಸಿತು. ವಯಸ್ಸಾದ ಮೇಲೆ ವಿದ್ಯಾಪತಿಯು ಗಂಗೆಯ ಪವಿತ್ರಜಲದಲ್ಲಿ ದೇಹತ್ಯಾಗ ಮಾಡಿದನು. ಅದಾಗಿ ಬಹಳ ಕಾಲವಾದರೂ ಜನರು ಈಗಲೂ ಅವನ ರೋಮಾಂಚಕಾರಿ ಹಾಡುಗಳನ್ನು ಹಾಡುತ್ತಾರೆ. ಈ ಕಥೆಯ ನೀತಿ ಹೀಗಿದೆ:**

**ಯಥಾ ಶಿವಸ್ತಥಾ ವಿಷ್ಣುರ್ಯಥಾ ವಿಷ್ಣುಸ್ತಥಾ ಶಿವಃ ।**
**ಅಂತರಂ ಶಿವವಿಷ್ಣ್ವೋಶ್ಚ ಮನಾಗಪಿ ನ ವಿದ್ಯತೇ ॥**

**(ಸ್ಕಂದ ಪುರಾಣ)**

**"ಶಿವನು ಹೇಗೋ, ವಿಷ್ಣುವೂ ಹಾಗೆಯೇ. ವಿಷ್ಣುವು ಹೇಗೋ, ಶಿವನೂ ಹಾಗೆಯೇ. ಶಿವ ಮತ್ತು ವಿಷ್ಣುವಿನಲ್ಲಿ ಸ್ವಲ್ಪವೂ ಭೇದವಿಲ್ಲ."**